**ಸಾಕ್ಷಿಯನ್ನು ದಿಃ *12/03/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಮುಂದುವರೆದ ಪಾಟೀ ಸವಾಲು : ಶ್ರೀ ಎಸ್‌ಜಿಎನ್ ವಕೀಲರಿಂದ 1, 3 ಮತ್ತು 4 ನೇ ಪ್ರತಿವಾದಿ ಪರವಾಗಿ.***

ಆರ್.ಎಸ್.ನಂ. 74/1 ಈರಪ್ಪನ ಹಿಸ್ಸೆಗೆ ಬಂದಿದ್ದು ಮತ್ತು ಆರ್.ಎಸ್.ನಂ. 74/2 ನನ್ನ ತಂದೆಗೆ ಹಿಸ್ಸೆಗೆ ಬಂದಿದ್ದು, ಆಗಿನಿಂದ ನನ್ನ ತಂದೆ ಮತ್ತು ಈರಪ್ಪ ಜೀವಂತವಿರುವವರೆಗೆ ಅವರುಗಳು ಮತ್ತು ಅವರು ತೀರಿಹೋದ ಮೇಲೆ ನಾವುಗಳು ಸದರಿ ನಮ್ಮ ಹಿಸ್ಸೆಗಳ ಆಸ್ತಿ ಮೇಲೆ ಬ್ಯಾಂಕಗಳಿಂದ ಸಾಲವನ್ನು ಪಡೆಯುತ್ತಾ ಮತುತ ಮರುಪಾವತಿ ಮಾಡುತ್ತ ಬಂದಿರುತೇವೆ ಎಂದರೆ ನಿಜ, ಸಾಕ್ಷಿದಾರರು ಮುಂದುವರೆದು ನನ್ನ ತಂದೆ ಪಡೆದಿಲ್ಲ, ನನ್ನ ದೊಡ್ಡಪ್ಪ ಪಡೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ಈ ರೀತಿ ನನ್ನ ದೊಡ್ಡಪ್ಪ ಸಾಲ ಪಡೆದುಕೊಳ್ಳುತ್ತಿದ್ದ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಬಹುದಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಅವು ಸಿಗುತ್ತವೆ ಇಲ್ಲವೂ ಎಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈ ರೀತಿ ನಾವು ಹತ್ತನೇ ತರಗತಿ ಇದ್ದಾಗ ನಮ್ಮ ದೊಡ್ಡಪ್ಪ ನನ್ನ ತಂದೆಯ ಹತ್ತಿರ ಸಾಲದ ಕುರಿತು ಸಹಿಗಳನ್ನು ಪಡೆಯುತ್ತಿರುವುದು ನೋಡಿರುತ್ತೇನೆ. ಸಾಮಾನ್ಯವಾಗಿ ಬ್ಯಾಂಕಿನವರು ಜಮೀನುಗಳ ಮಾಲೀಕರಿಗೆ ಮಾತ್ರ ಸದರಿ ಸಂಬಂಧಿತ ದಾಖಲಾತಿಗಳನ್ನು ಖಚಿತಪಡಿಸಿಕೊಂಡು ಸಾಲ ನೀಡುತ್ತಾರೆ ಎಂದರೆ ನಿಜ.

ನನ್ನ ದೊಡ್ಡಪ್ಪ ನಮಗೆ ಬಂದಿರುವ ಆಸ್ತಿಗಳ ಮೇಲೆ ಸಾಲ ಪಡೆದಿಲ್ಲ, ಅವರಿಗೆ ಬಂದ ಆಸ್ತಿಗಳ ಮೇಲೆ ಮಾತ್ರ ಪಡೆದಿರುತ್ತಾರೆ ಎಂದರೆ ಸುಳ್ಳು. ನನ್ನ ತಂದೆ ತೀರಿಹೋದ ನಂತರ ಆರ್.ಎಸ್.ನಂ. 74/2 ನಮ್ಮ ಹೆಸರಿಗೆ 2003-04 ರಲ್ಲಿ ಬಂದಿರಬಹುದು. ಈ ರೀತಿ ನಮ್ಮ ಹೆಸರಿಗೆ ಬದಲಾವಣೆ ಆದ ನಂತರ ನಾನು ಸಹ ಸದರಿ ಜಮೀನಿನ ಮೇಲೆ ಬ್ಯಾಂಕನಲ್ಲಿ ಸಾಲ ಪಡೆದಿದ್ದು ಮತ್ತು ಮರುಪಾವತಿ ಮಾಡಿದ್ದು ಇರುತ್ತದೆ ಎಂದರೆ ನಿಜ. ಅದೇ ರೀತಿ ಪ್ರತಿವಾದಿಗಳು ಸಹ ಅವರ ತಂದೆಯ ಹಿಸ್ಸೆಯಲ್ಲಿ ಅವರ ತಂದೆ ಮರಣಾನಂತರ ಸಾಲ ಪಡೆಯುವುದು ಮರುಪಾವತಿ ಮಾಡುವುದು ಮಾಡುತ್ತಾ ಬಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಆರ್.ಎಸ್.ನಂ. 112/ಪಿ ಮೂಲತಃ ಸರ್ವೇ ನಂಬರ 85/2 ಇದ್ದು, 9 ಎಕರೆ 4 ಗುಂಟೆ ಕ್ಷೇತ್ರ ಇರುತ್ತದೆ ಎಂದರೆ ನಿಜ. ಸದರಿ ಒಟ್ಟು ಕ್ಷೇತ್ರದಲ್ಲಿ ಒಬ್ಬ ಮಹದೇವಪ್ಪ ಕಂಗಳೆಕರ ಎನ್ನುವವರು ಫಾರ್ಮ

ನಂ.7 ಅರ್ಜಿಯ ಮೇರೆಗೆ 4 ಎಕರೆ 22 ಗುಂಟೆ ಜಮೀನಿನ ಸ್ವಾಧೀನತೆ ಪಡೆದಿರುತ್ತಾರೆ ಎಂದರೆ ನಿಜ. ಮಿಕ್ಕಿದ 4 ಎಕರೆ 22 ಗುಂಟೆ ಜಮೀನು 1965 ರಿಂದ ಉತ್ತರ ಭಾಗದ ಅರ್ಧ ಜಮೀನು ನನ್ನ ತಂದೆ ಮತ್ತು ಮಿಕ್ಕಿದ ದಕ್ಷಿಣ ಭಾಗದ ಅರ್ಧ ಜಮೀನು ವೀರಪ್ಪ ಮತ್ತು ಆತನ ಮಕ್ಕಳು ಪ್ರತಿವಾದಿಗಳು ಸಾಗುವಳಿ ಮಾಡುತ್ತ ಬಂದಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿ ಉತ್ತರ ಭಾಗದ ಅರ್ದ ಜಮೀನು ಯಾವ ಇಸ್ವಿಯಿಂದ ಉಳುಮೆ ಮಾಡುತ್ತಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಅಜ್ಜಿ ಯಮನಮ್ಮ ಜೀವಂತವಿರುವವರೆಗೆ ಎಲ್ಲ ಜಮೀನುಗಳನ್ನು ನಾವೇ ಉಳುಮೆ ಮಾಡುತ್ತಿದ್ದು, ಅಜ್ಜಿ ತೀರಿಹೋದ ನಂತರ ಉತ್ತರ ಭಾಗದ ಜಮೀನು ನಾವುಗಳು ಉಳುಮೆ ಮಾಡುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ಅದೇ ರೀತಿ ದಕ್ಷಿಣ ಭಾಗದ ಅರ್ದ ಜಮೀನು ಪ್ರತಿವಾದಿಯರು ಉಳುಮೆ ಮಾಡುತ್ತಿದ್ದಾರೆ ಎಂದರೆ ನಿಜ. ಸದರಿ ಉತ್ತರ ಭಾಗದ ಜಮೀನಿನಲ್ಲಿ ನಾವು ಬೋರುಬಾವಿ ಹೂಡಿ ಮನೆಯನ್ನು ಸಹ ಕಟ್ಟಿಸಿರುತ್ತೇವೆ ಎಂದರೆ ನಿಜ. ಈ ರೀತಿ ಮನೆ ಮತ್ತು ಬೋರ ಹೊಡಿಸಿ ಅಂದಾಜು 30-35 ವರ್ಷಗಳಾಗಿವೆ ಎಂಬ ಪ್ರಶ್ನೆಗೆ ಸಾಕ್ಷಿದಾರರು 10-12 ವರ್ಷಗಳು ಆಗಿರಬಹುದು ಎಂದು ಉತ್ತರಿಸುತ್ತಾರೆ. ಈ ರೀತಿ ಇರುವ ಅವರ ಸ್ವಾಧೀನತೆಗೆ ನಾವಾಗಲಿ, ನಮ್ಮ ಸ್ವಾಧೀನತೆಗೆ ಅವರಾಗಲಿ ತಕರಾರು ಮಾಡಿಲ್ಲ ಎಂದರೆ ನಿಜ.

ಈ ರೀತಿ ಮೇಲೆ ಹೇಳಿರುವ ಎರಡು ಜಮೀನುಗಳಲ್ಲಿ ನಮ್ಮ ನಡುವೆ ಹಿಸ್ಸೆಗಳು ಆಗಿದ್ದರು ಸಹ ಅವುಗಳು ಪ್ರತ್ಯೇಕವಾಗಿ ಪೋಡಿಯಾಗದ ಕಾರಣ ನ್ಯಾಯಾಲಯಕ್ಕೆ ಬಂದಿರುತ್ತೇವೆ ಎಂದರೆ ಸಾಕ್ಷಿದಾರರು ಪೋಡಿಯಾಗಬೇಕು ಮತ್ತು ವಾಟ್ನಿ ಸಹ ಆಗಬೇಕು ಎಂದು ಉತ್ತರಿಸುತ್ತಾರೆ.

1964 ನೇ ಇಸ್ವಿಯಲ್ಲಿ ಜಿ.ಪಿ.ನಂ.1902 ಮತ್ತು 1903 ಮನೆ ಅಸ್ತಿಗಳಿಗೆ ನನ್ನ ತಂದೆ ಮತ್ತು ವೀರಪ್ಪನ ಹೆಸರು ಜಂಟಿಯಾಗಿದ್ದು, ಅವುಗಳು ಕಡಿಮೆಯಾಗಿ ನನ್ನ ತಂದೆಯ ಹೆಸರು ಜಿ.ಪಿ.ನಂ.1903 ಕ್ಕೆ ಮತ್ತು ವೀರಪ್ಪನ ಹೆಸರು 1902 ಕ್ಕೆ ದಾಖಲಾಯಿತು ಎಂದರೆ ಸರಿಯಲ್ಲ. 1903 ಮನೆ ನನ್ನ ತಂದೆ ಜೀವಂತವಿರುವವರೆಗೆ ಅವರ ಕಬ್ಜೆ ವಹಿವಾಟಿಯಲ್ಲಿದ್ದು, ನಂತರ ನಮ್ಮ ವಹಿವಾಟಿಗೆ ಬಂತು ಎಂದರೆ ನಿಜ. ಅದೇ ರೀತಿ 1902 ಮನೆ ವೀರಪ್ಪ ಜೀವಂತವಿರುವವರೆಗೆ ಅವರ ಕಬ್ಜೆ ವಹಿವಾಟಿಯಲ್ಲಿದ್ದು, ನಂತರ ಅವರ ಮಕ್ಕಳಾದ ಪ್ರತಿವಾದಿಗಳ ವಹಿವಾಟಿಗೆ ಬಂತು ಎಂದರೆ ನಿಜ. ನನ್ನ ತಂದೆಯ ಹೆಸರು ಸದರಿ ಆಸ್ತಿಗೆ ಯಾವ ಇಸ್ವಿಯಲ್ಲಿ ಮತ್ತು ಯಾವ ಆಧಾರದ ಮೇಲೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ

ತಂದೆ ತೀರಿಹೋಗುವ ಕಾಲಕ್ಕೆ ಸದರಿ ಆಸ್ತಿ ಅವರೊಬ್ಬರ ಹೆಸರಿಗೆ ಇದ್ದು, ನಂತರ ನಮ್ಮ ಹೆಸರಿಗೆ ವರ್ಗಾವಣೆಯಾಯಿತು ಎಂದರೆ ನಿಜ. ಅದೇ ರೀತಿ 1902 ಮನೆ ಆಸ್ತಿ ವೀರಪ್ಪ ಜೀವಂತವಿರುವವರೆಗೆ ಅವರ ಹೆಸರಲ್ಲಿ, ನಂತರ ಅವರ ಮಕ್ಕಳಾದ ಪ್ರತಿವಾದಿಗಳ ಹೆಸರಿಗೆ ಬಂತು ಎಂದರೆ ನಿಜ. ಈ ರೀತಿ ಇರುವ ಅವರ ಸ್ವಾಧೀನತೆಗೆ ನಾವಾಗಲಿ, ನಮ್ಮ ಸ್ವಾಧೀನತೆಗೆ ಅವರಾಗಲಿ ತಕರಾರು ಮಾಡಿಲ್ಲ ಎಂದರೆ , ಅವರು ನಮ್ಮ ಸ್ವಾಧೀನತೆ ಹರಕತ್ತು ಮಾಡಿಲ್ಲ, ಅವರ ಸ್ವಾಧೀನತೆಗೆ ನಾವು ಹರಕತ್ತು ಮಾಡಿದ್ದೇವೆ. ಈ ರೀತಿ ನನ್ನ ತಂದೆ ಜೀವಂತವಿದ್ದಾಗ ಸದರಿ ಮನೆ ಸ್ವಾಧೀನತೆ ಹರಕತ್ತು ಮಾಡಿದ್ದೇವೆ ಮತ್ತು ಮನೆ ಬಿಟ್ಟುಕೊಡಲು ಕೇಳಿಕೊಂಡಿದ್ದೇನೆ.

ದಾವಾ ಮನೆ ನಂ.1923/ಎ ರನ್ನು ಪ್ರತಿವಾದಿಯರ ತಂದೆ ವೀರಪ್ಪ 1972 ರಲ್ಲಿ ಖರೀದಿ ಮಾಡಿದರು ಎಂದರೆ ಸರಿಯಲ್ಲ. ಸದರಿ ಆಸ್ತಿ ಯಾರ ಮಾಲೀಕತ್ವಕ್ಕೆ ಸಂಬಂಧಿಸಿದ್ದು ಮತ್ತು ಯಾರದು ಎನ್ನುವ ಕುರಿತು ನನಗೆ ಗೊತ್ತಿಲ್ಲ. ಸದರಿ ಮನೆ ಯಾರ ಕಬ್ಜೆ ವಹಿವಾಟಿನಲ್ಲಿದೆ ಎಂದು ನನಗೆ ಗೊತ್ತಿಲ್ಲ, ಸಾಕ್ಷಿದಾರರು ಸ್ವತ ನಾವು ಕಬ್ಜೆಯಲ್ಲಿಲ್ಲ ಎಂದು ಉತ್ತರಿಸುತ್ತಾರೆ. ಆದ್ದರಿಂದ ಸದರಿ ಆಸ್ತಿಯಲ್ಲಿ ನಮ್ಮದು ಹಕ್ಕು ವ ಹಿತಾಸಕ್ತಿ ಇರುವುದಿಲ್ಲ ಎಂದರೆ ನಿಜ. ಈ ಆಸ್ತಿಗೆ ಸಂಬಂಧಿಸಿ ನಾನು ಯಾವುದೇ ರೀತಿ ಮಾಗಣಿ ಕೇಳಿಲ್ಲ ಮತ್ತು ದಾವೆ ಹೂಡಿಲ್ಲ ಎಂದರೆ ನಿಜ. ನಮಗೆ 1902 ಮತ್ತು 1903 ಮನೆಗಳು ಮಾತ್ರ ಸಂಬಂಧಿಸಿದ್ದು ಇರುತ್ತದೆ ಎಂದು ಸ್ವತ ಹೇಳುತ್ತಾರೆ. ಸದರಿ ಮನೆಯನ್ನು ವೀರಪ್ಪ 1972 ರಲ್ಲಿ ತನ್ನ ಸ್ವಂತ ಗಳಿಕೆಯಿಂದ ಖರೀದಿ ಮಾಡಿರುವ ವಿಷಯ ಸಂಗತಿ ನನಗೆ ಗೊತ್ತಿಲ್ಲ. ಸದರಿ ಮನೆ ಖರೀದಿ ಮಾಡುವಾಗ ನಾವಾಗಲಿ ನಮ್ಮ ತಂದೆಯಾಗಲಿ ಹಣವನ್ನು ಸಂದಾಯಿಸಿದ ಕುರಿತು ನನಗೆ ಗೊತ್ತಿಲ್ಲ. ಸಾಕ್ಷಿದಾರರು ಮುಂದುವರೆದು 1980 ನೇ ಇಸ್ವಿಯಲ್ಲಿ ನಾವುಗಳು ಬೇರೆಯಾಗಿರುತ್ತೇವೆ ಎಂದು ಸ್ವತ ಹೇಳುತ್ತಾರೆ.

2008 ರಲ್ಲಿ ಪ್ರತಿವಾದಿಯರು ಅಸಲು ದಾವೆ ನಂ.330/2008 ದಾವೆ ಹೂಡದೇಯಿದ್ದರೆ ನಮ್ಮ ನಡುವೆ ಯಾವುದೇ ರೀತಿ ತಂಟೆ ತಕರಾರು ಬರುತ್ತಿರಲಿಲ್ಲ ಎಂದರೆ ನಿಜ. ಸದರಿ ದಾವೆ 1923/ಎ ಮನೆಯನ್ನು ಅತಿಕ್ರಮಣ ಮಾಡಿ ಕಟ್ಟಿದ್ದಾರೆ ಎಂದು ಹೂಡಿದಕ್ಕೆ ಅದರ ವಿರುದ್ದ ನಾವುಗಳು ಅಸಲು ದಾವೆ ನಂ.423/2012 ವಾಟ್ನಿ ಕೋರಿ ಹೂಡಿದ್ದೇವೆ ಎಂದರೆ ನಿಜ. ಈ ರೀತಿ ಸದರಿ ಮನೆಯ

ಅತೀಕ್ರಮಣ ಮಾಡಿರುವ ದಾವೆಯನ್ನು ಹಿಂಪಡೆದರೆ ನಮ್ಮ ಮತ್ತು ಅವರ ನಡುವೆ ಯಾವುದೇ ರೀತಿ ತಕರಾರು ಮತ್ತು ಜಗಳವಿರುವುದಿಲ್ಲ ಎಂದರೆ ನಿಜ.

ನನ್ನ ತಂದೆ ಮತ್ತು ವೀರಪ್ಪ ಜೀವಂತವಿರುವಾಗ ಅವರ ನಡುವೆ ಕಾನೂನುಬದ್ದವಾಗಿ ವಾಟ್ನಿಯಾಗಿರುತ್ತದೆ ಎಂದರೆ ಸರಿಯಲ್ಲ. ಈ ರೀತಿ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

***ಮರು ವಿಚಾರಣೆ: ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.